ಸಹಿಸಿ ಸಾಕಾಗಿ ಆಯಮ್ಮ ಲಾಯರಾಗಿದ್ದಾಳೆ. ಬರೀ ಅವರದೇ ಪುಕಾರು ಹೇಳ್ತಿಯಲ್ಲ. ನೀನೇನು ಸಭ್ಯಸ್ಥ ಅದೀಯಾ? ಸುಮ್ಮನಿದ್ದವರ ಕೈಲೂ ಹತ್ತು ಸುಳ್ಳು ಹೇಳಿಸೋ ಕಲಾವಿದ ನೀನು" ಎಂದು ಗೆಳೆಯನ ದಬಾಯಿಸಿದೆ. "ಅದೆಲ್ಲಾ ಯಾಕಪ್ಪ. ನೀನೇ ಬಂದಾಗ ನೋಡು" ಎಂದು ಆಹ್ವಾನ ಕೊಟ್ಟಿದ್ದ. ಇದು ಬರೊಬ್ಬರಿ ಹತ್ತು ವರ್ಷದ ಹಿಂದಿನ ಮಾತು.

ನಮ್ಮ ಜಯಮ್ಮ ದೊಡ್ಡ ಕುಟುಂಬದಿಂದ ಬಂದ ಕಿರಿಯ ಮಗಳು. ಒಂಥರ ಭಾವುಕ ಜೀವಿ ಮತ್ತು ಮುಗ್ಧೆ. ವಿಪರೀತ ದೈವಭಕ್ತೆ. ಗಂಡ ಮಕ್ಕಳ ಮಾತನ್ನು ಬಿಟ್ಟು ಉಳಿದ ಎಲ್ಲರ ಮಾತನ್ನು ನಿಜವೆಂದು ನಂಬುವ ತೆರೆದ ಮನಸ್ಸಿನವಳು. ಯಾವ ಧರ್ಮದ ಯಾವ ದೇವರನ್ನೂ ಬಿಡದೆ ಆರಾಧಿಸಿ, ಪೂಜಿಸುವ ಹೃದಯವಂತೆ. ಟೀವಿಯಲ್ಲಿ ಬರುವ ಎಲ್ಲಾ ಸ್ವಾಮಿಗಳ ಮಾತನ್ನು ಅಕ್ಷರಶಃ ಪಾಲಿಸುವಾಕೆ. ಪ್ರೇತ, ಭೂತ, ಮಾಟ, ಮಂತ್ರ, ಎಲ್ಲಾ ಒಪ್ಪುವಾಕೆ.

ನನ್ನ ಕಂಡಾಗ, "ಅಣ್ಣಾವ್ರೇ ನಿಮ್ಮ ಅಲ್ಲಾ ಸಾಮಿ ಫಕೀರಪ್ಪನ ಹರಕೆಯಿಂದ್ಲೇ ನನ ಗಂಡ ಹುಟ್ಟಿದ್ದಂತೆ. ವಾರಕ್ಕೊಂದು ಸಲ ಸಕ್ರೆ ಕೊಟ್ಟು ಧೂಪ ಹಚ್ಚುಸ್ತೀನಿ ದರ್ಗಾಕ್ಕೆ. ನಿಮ್ಮ ಅಲ್ಲಾ ಕೂಗ್ದಾಗೆಲ್ಲಾ ಊದಿನಗಡ್ಡಿ ಹಚ್ಚತೀನಿ" ಎಂದು ನಿರುಮ್ಮಳವಾಗಿ ಹೇಳಿ ಇದನ್ನು ಚಾಚು ತಪ್ಪದೆ ಪಾಲಿಸುವಾಕೆ. ತಿಂಗಳಿಗೆ ಕನಿಷ್ಠ ಐದಾದರೂ ಹರಕೆ ಹೊರುವ ಇಲ್ಲವೇ ಬೇರೆಯವರ ತಲೆಗೆ ಹೊರಿಸುವ ಚತುರೆ. ಬೆಳಗ್ಗೆ ಮತ್ತು ಸಂಜೆಯ

